






'ಪ್ರಿಸಂ' ಇದು ಕೇರಳ ಸರಕಾರದ ಒಂದು ಮಹತ್ವದ ಯೋಜನೆ. ಕಲ್ಲಿಕೋಟೆ ಜಿಲ್ಲೆಯ ಉತ್ತರ ಕ್ಷೇತ್ರದ ಸಂಸದ ಕೆ.ವಿ. ಪ್ರದೀಪ್ ಕುಮಾರ್ ಅವರ ಆಶಯ ಕೇರಳದ ಸರಕಾರಿ ಶಾಲೆಗಳನ್ನು ಎಲ್ಲ ರೀತಿಯಲ್ಲಿ ಉನ್ನತೀಕರಿಸಿ ಅವುಗಳ ವೈಭವವನ್ನು ಮತ್ತೆ ಪುನರುಜ್ಜೀವನಗೊಳಿಸುವುದಾಗಿದೆ. ಸ್ಥಳೀಯ ಶಾಲೆಗಳನ್ನು ಸಮಾಜದ ಹಲವಾರು ವಿಭಾಗಗಳ ಸಹಕಾರದಿಂದ ಅತ್ಯುನ್ನತ ದರ್ಜೆಗೇರಿಸುವ ನವೀನ ಆಶಯ. ಈ ಶಾಲೆಗಳ ಉನ್ನತಿಗೆ ಕೇವಲ ಸರಕಾರವನ್ನು ಮಾತ್ರವಲ್ಲದೆ ಸಮಾಜದ ಇತರ ವಿಭಾಗಗಳಾದ ಎನ್.ಜಿ.ಒ.ಸಂಸ್ಥೆಗಳು, ಕಾರ್ಪರೇಟ್ ಸಂಸ್ಥೆಗಳು, ಉದ್ಯಮಿಗಳು, ಇತರ ಸಂಶೋಧನಾ ಕೇಂದ್ರಗಳು, ಪೋಷಕರು ಮೊದಲಾದ ವರ್ಗದವರನ್ನು ಜೊತೆಗೂಡಿಸುವ ಯೋಜನೆ.

ಕಲ್ಲಿಕೋಟೆ ಐ.ಐ.ಎಂ. ನ ಒಂದು ವರದಿ ಇದಕ್ಕೆ ನಾಂದಿಯಾಯಿತು. ಇದರಿಂದ ಪ್ರೇರಣೆ ಪಡೆದ ಪ್ರದೀಪ್ ಕುಮಾರ್ ಅವರು 'ಪ್ರಿಸಂ' ಎಂಬ ಹೆಸರಿನ ಆಶಯವನ್ನು ಸರಕಾರದ ಮುಂದಿಟ್ಟರು. ಮೊದಲ ಹಂತದಲ್ಲಿ ತಮ್ಮ ಕ್ಷೇತ್ರದಲ್ಲೇ ಇದರ ಫಲಿತಾಂಶ ಸಿಗಬೇಕು, ತಮ್ಮ ಊರಿನ ಶಾಲೆ ಉನ್ನತ ದರ್ಜೆಗೆ ಏರಬೇಕು ಎಂಬ ಅವರ ಸಾಧನೆಯೇ ನಡಕ್ಕಾವು ಹೆಣ್ಮಕ್ಕಳ ಇಂದಿನ ಸವಲತ್ತುಗಳಿಗೆ ಕಾರಣವಾಯಿತು. ಅತ್ಯಲ್ಪ ಅವಧಿಯಲ್ಲಿ ಪೂರ್ಣಗೊಂಡ ಯೋಜನೆ 2014ರಲ್ಲಿ ಉದ್ಘಾಟನೆಗೊಂಡಿತು. ಕಲ್ಲಿಕೋಟೆ ಜಿಲ್ಲೆಯ ಕಾರಪ್ಪರಂಬ ಮತ್ತು ಆಲ್ಲಾವಟ್ಟಂ ಪ್ರೌಢಶಾಲೆಗಳಲ್ಲಿ ಈ ಯೋಜನೆಯ ಅನುಷ್ಠಾನ ತ್ವರಿತ ಗತಿಯಲ್ಲಿ ಸಾಗಿದೆ. ಇನ್ನೂ ನೂರು ಶಾಲೆಗಳು ಈ ಯೋಜನೆಗೆ ಸೇರ್ಪಡೆಯಾಗಲಿವೆ.

ಇಂದು ನಮ್ಮ ಸರಕಾರಿ ಶಾಲೆಗಳಲ್ಲಿ ಪಠ್ಯಕ್ರಮ, ಶಿಕ್ಷಕರ ಗುಣಮಟ್ಟ ತೃಪ್ತಿಕರವಾಗಿಯೇ ಇದೆ. ಶಿಕ್ಷಕರಲ್ಲಿ ಹೆಚ್ಚಿನವರು ಸ್ನಾತಕೋತ್ತರ ಪದವೀಧರರು. ಆದರೆ ಸಮಸ್ಯೆ ಇರುವುದು ಸೌಲಭ್ಯಗಳ ವಿಷಯದಲ್ಲಿ. ಇಂದಿಗೂ ನಮ್ಮಲ್ಲಿ ಅನೇಕರಿಗೆ ಇಂತಹ ಶಾಲೆಗಳೆಂದರೆ ಇಲ್ಲಗಳ ಕೊಂಪೆ. ಉತ್ತಮ ಕೊಠಡಿಗಳು, ಸ್ವಚ್ಛ ಶೌಚಾಲಯಗಳು, ಆಧುನಿಕ ಬೋಧನಾ ವಿಧಾನಗಳು, ಶಿಸ್ತಿನ ಪರಿಸರ, ಅದೆಷ್ಟೋ ಕೊರತೆಗಳು ಅಥವಾ ಇದ್ದರೂ ಕೂಡ ಎಲ್ಲವೂ ಕಳಪೆ ದರ್ಜೆಯವು. ಇದೆಲ್ಲ ಕಾರಣಗಳಿಂದಲೇ ಸರಕಾರಿ ಶಾಲೆಗಳು ದಯನೀಯ ಸ್ಥಿತಿಗೆ ತಲುಪಿವೆ. ಹಲವು ಶಾಲೆಗಳು ಮುಚ್ಚುವ ಸ್ಥಿತಿಗೆ ತಲುಪುವಂತೆ ಮಾಡಿದೆ. ಕೇವಲ ಬಡ, ಕೆಳ, ಮಧ್ಯಮ ವರ್ಗದ ವಿದ್ಯಾರ್ಥಿಗಳ ಆಶ್ರಯ ತಾಣವಾಗಿದೆ. ಇಂತಹ ಸ್ಥಿತಿಯನ್ನು ಮೀರಿಸಲು ಬಾಹ್ಯ ಸೌಕರ್ಯಗಳ, ಒಟ್ಟು ಪರಿಸರವನ್ನು ಆಕರ್ಷಿಸಬೇಕಾಗಿದೆ. ಇದೆಲ್ಲವಕ್ಕೂ ಕೇವಲ ಸರಕಾರವನ್ನು ಮಾತ್ರ ಅವಲಂಬಿಸದೆ ಎಲ್ಲರೂ ಕೈಗೂಡಿಸುವಂತೆ ಮಾಡುವುದು 'ಪ್ರಿಸಂ'ನ ಉದ್ದೇಶ. 'ಪ್ರಿಸಂ' ಈ ಎಲ್ಲ ಕೊರತೆಗಳನ್ನು ಇಲ್ಲವಾಗಿಸಿ ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನು, ಸ್ವಯಂಭಾವನೆಯನ್ನು ಉತ್ತಮಪಡಿಸುವ ದಿಟ್ಟ ಯೋಜನೆ.

'ಪ್ರಿಸಂ' ಯೋಜನೆಯಡಿ ಕಟ್ಟಿದ ಈ ಕಟ್ಟಡಗಳ ವಿನ್ಯಾಸ ಮಾಡಿದವರು